ಶ್ರೀ ವೀರೇಂದ್ರ ಪಾಟೀಲ್.—ಇನ್‌ವೆಸ್ಟಿಗೇಷನ್ ಮಾಡುತ್ತಾ ಇದ್ದಾರೆ. ನಮ್ಮ ಪರ್ಮಿಷನ್ ಇಲ್ಲದೇ ಏನೂ ಮಾಡುವ ಹಾಗಿಲ್ಲ ಎಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ, ಅವರ ಕನ್‌ಕರೆನ್ಸ್ ಇಲ್ಲದೆ ಏನೂ ಮಾಡುವ ಹಾಗಿಲ್ಲ. ನುಮಾರು 10 ಹಳ್ಳಿಗಳು ಮುಳುಗಡೆಯಾಗುತ್ತವೆ, ಅವು ಯಾವುವು ಎಂದರೆ : ಗೋಧಿಪಾಡ್, ಕುರ್ತಪಾಡ್, ನರ್ಜಾಪರ, ಕುರ್ಲಿ, ಅಗ್ರಹಾರ, ರಾಮಪುರ, ನಾಮಗುಡ್ಡ, ಕಾರ್ಜಪಾಡ್, ನರಗೆಗುಡ್ಡ.

ಶ್ರೀ ಎಂ. ನಾಗಪ್ಪ.—ಅಗ್ರಹಾರ ಮತ್ತು ನರಗೆಗುಡ್ಡ ಇವು ಪೂರ್ಣ ಮುಳುಗಿ ಹೋಗುತ್ತವೆ. ಆದ್ದರಿಂದ ಈ ಪ್ರಾಜೆಕ್‌ನ್ನು ಕಟ್ಟಕೂಡದು ಎಂದು ಅದೇಶ ಕೊಡಲಿಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಕೇಂದ್ರ ಸರ್ಕಾರದವರು ನಮಗೆ ತಿಳಿಸಿದ್ದಾರೆ. ನಮ್ಮ ಕನ್‌ಕರೆನ್ಸ್ ಇಲ್ಲದೇ ಮಾಡುವ ಹಾಗಿಲ್ಲ, ನಾವು ಪರ್ಮಿಷನ್ ಕೊಟ್ಟರೆ ಮಾತ್ರ ಸಾಧ್ಯ ಎಂದು. ಅವರು ಪರ್ಮಿಷನ್ ಕೊಟ್ಟಾಗ, ಆ ಪ್ರಶ್ನೆ ಬರುತ್ತದೆ. ಆ ಪ್ರಶ್ನೆ ಬಂದಾಗ ಪರಿಶೀಲನೆ ಮಾಡಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಎನ್. ಶರಣಗೌಡ (ಇನಾಂದಾರ್).—ಕೇಂದ್ರ ಸರ್ಕಾರದವರು ಪತ್ರವ್ಯವಹಾರ ಮಾಡದೆ, ಅಥವಾ ನಿಮ್ಮನ್ನು ಕೇಳದೆ ಯಾವುದೂ ಮಾಡುವುದಿಲ್ಲ ಎಂದು ಹೇಳುವುದು ಸ್ವಾಭಾವಿಕ ವಾಗಿದೆ. ಆದರೆ ನಿಮಗೆ ಗೊತ್ತಿಲ್ಲದೇ ಅದನ್ನು ಕಟ್ಟಿಬಿಟ್ಟು ಮೇಲೆ ಹಳ್ಳಿಗಳು ಮುಳುಗುತ್ತ ಹೋಗುತ್ತವೆ. ಅದರ ಸಲುವಾಗಿ ನೀವು ಏನು ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಇನ್‌ವೆಸ್ಟಿಗೇಷನ್ ಸಲುವಾಗಿ ಪರ್ಮಿಷನ್ ಕೇಳಿದರು, ಈ ಪ್ರಾಜೆಕ್ಟ್ ಕಟ್ಟುವುದರಿಂದ ಎಷ್ಟು ಮೈಲ ಮುಳುಗಡೆಯಾಗುತ್ತದೆ, ಅದರ ವಿಸ್ತೀರ್ಣ ಎಷ್ಟಾಗುತ್ತದೆ ಎಂಬ ಸರ್ವೆಸ್ಟಾರವಾದ ಇನ್‌ಫರ್ಮೇಷನ್‌ನ್ನು ಫರ್ನಿಷ್ ಮಾಡಿದಮೇಲೆ, ಪರ್ಮಿಷನ್ ಕೊಡ ಬೇಕಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ.

SHORT NOTICE QUESTION AND ANSWER

Price of Jowar.

Q.—113. Sri A. J. DODDAMETI (Ron).—

Will the Minister for Food and Civil Supplies be pleased to state :—

(*a*) whether Government is aware that the price of jowar has risen, *viz.*, Rs. 15 per quintal within a short period of 3 weeks in the Markets of Gadag, Nargund, Gajendragad, Holealur, Sirhatti and Mundargi in Dharwar district due to scarcity of jowar ;

(*b*) whether Government is aware that anxiety is created among the people of the said area due to high prices of jowar ;

(*c*) if so, the steps taken by the Government to check the price of the jowar ?

A.—Sri B. D. JATTI (Minister for Food and Civil Supplies).

(*a*) No.

(*b*) Does not arise.

(*c*) Does not arise.

2-00 P.M.

ಶ್ರೀ ಎ. ಜೆ. ದೊಡ್ಡಮೇಟಿ.—ನಾನು ಹೇಳಿರತಕ್ಕ ಆರು ನಗರಗಳಲ್ಲಿ ಜೂನ್ 30ರಿಂದ ಜುಲೈ 25ರವರೆಗೆ ಅನುಕ್ರಮವಾಗಿ ಜೋಳದ ಧಾರಣೆ ಏನಿತ್ತು, ಅನಂತರ ಅದರ ಧಾರಣೆಯೇನಿದೆ ಎಂಬುದನ್ನು ತಿಳಿಸುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ನನ್ನಲ್ಲಿ ಜೂನ್ 30ರ ಹಾಗೂ ಜುಲೈ 25ರ ಎರಡೂ ರೇಟುಗಳಿವೆ. ಅವು ಈ ರೀತಿಯಾಗಿವೆ: ಖಾರೀಫ್—ಗದಗ್‌ನಲ್ಲಿ 80 ರಿಂದ 87ರೂಪಾಯಿಗಳು. ಅಂದರೆ ಏಳು ರೂಪಾಯಿಗಳು ಹೆಚ್ಚಾಗಿವೆ. ನರಗುಂದದಲ್ಲಿ 72 ರಿಂದ 81, ಅಂದರೆ ಒಂಭತ್ತು ರೂಪಾಯಿಗಳು ಹೆಚ್ಚಾಗಿದೆ, ಗಜೇಂದ್ರಗಡ 85 ರಿಂದ 90, ಅಂದರೆ ಐದು ರೂಪಾಯಿಗಳು ಜಾಸ್ತಿ ಆಗಿದೆ, ಹೊಳೆ ಆಲೂರು 74 ರಿಂದ 80, ಅಂದರೆ ಆರು ರೂಪಾಯಿಗಳು ಜಾಸ್ತಿ ಆಯಿತು, ಶಿರಹಟ್ಟಿಯಲ್ಲಿ 90 ರಿಂದ 103, ಅಂದರೆ 13 ರೂಪಾಯಿಗಳು ಹೆಚ್ಚಾಯಿತು, ಮತ್ತು ಮುಂಡರ್ಗಿಯಲ್ಲಿ 90 ರಿಂದ 93, ಅಂದರೆ ಮೂರು ರೂಪಾಯಿಗಳು ಜಾಸ್ತಿಯಾಯಿತು. ಇನ್ನು ಹೀಗೆ ರಾಬಿಜೋಳ :—ಗದಗ್‌ನಲ್ಲಿ 91 ರಿಂದ 98, ಅಂದರೆ ಏಳು ರೂಪಾಯಿಗಳು ಜಾಸ್ತಿಯಾಯಿತು. ನರಗುಂದದಲ್ಲಿ 91 ರಿಂದ 95, ಅಂದರೆ ನಾಲ್ಕು ರೂಪಾಯಿ ಜಾಸ್ತಿ ಆಯಿತು. ಗಜೇಂದ್ರಗಡದಲ್ಲಿ 90 ರಿಂದ 95, ಅಂದರೆ ಐದು ರೂಪಾಯಿಗಳು ಜಾಸ್ತಿ ಆಯಿತು. ಹೊಳೆ ಆಲೂರು 80 ರಿಂದ 85, ಅಂದರೆ ಐದು ರೂಪಾಯಿಗಳು ಜಾಸ್ತಿಯಾಯಿತು. ಶಿರಹಟ್ಟಿಯಲ್ಲಿ 84 ರಿಂದ 93, ಅಂದರೆ ಒಂಭತ್ತು ರೂಪಾಯಿಗಳು ಜಾಸ್ತಿ ಆಯಿತು. ಇನ್ನು ಮುಂಡರ್ಗಿಯಲ್ಲಿ 95 ರಿಂದ 100, ಅಂದರೆ ಐದು ರೂಪಾಯಿ ಜಾಸ್ತಿಯಾಯಿತು. ಮಾನ್ಯ ಸದಸ್ಯರು ಹೇಳಿದಂತೆ ಶೇಕಡ 15ರಷ್ಟು ಎಲ್ಲಿಯೂ ಬೆಲೆ ಹೆಚ್ಚಿಲ್ಲ.

ಶ್ರೀ ಬಿ. ಧಾನ್ಕರ ಶೆಟ್ಟಿ.—ಮೈಸೂರು ರಾಜ್ಯದಲ್ಲಿ ಕಳೆದ 15 ದಿನಗಳಲ್ಲಿ ಆಹಾರ ಧಾನ್ಯಗಳ ಬೆಲೆ ಶೇಕಡ 15—20ರಷ್ಟು ಏರಿರತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ತಮ್ಮ ಅಭಿಪ್ರಾಯ ತಪ್ಪು. ಶೇಕಡ 15ರಷ್ಟು ಕಡಮೆ ಆಗಿದೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಈ ಆರು ತಾಲ್ಲೂಕುಗಳಲ್ಲೂ ಜೋಳ ಸಿಕ್ಕುತ್ತಿಲ್ಲ ಅಲ್ಲಿಗೆ ಅದನ್ನು ಮಾರಾಟ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ನಮ್ಮಲ್ಲಿ ಇನ್ನೂ 62 ಸಾವಿರ ಮೂಜೆ ಜೋಳವಿದೆ. ಕೊಡತ್ತೇವೆ.

ಶ್ರೀ ಎಸ್. ಶರಣಗೌಡ ಇನಾಂದಾರ್.—ಮೈಸೂರು ರಾಜ್ಯದಲ್ಲಿ ಡಿಫಿಸಿಟ್ ಏರಿಯಾ ಮತ್ತು ಸರ್ಪ್ಲಸ್ ಏರಿಯಾ ಎಂದು ಹೇಳುತ್ತಾ ಕಾಳುಗಳನ್ನು ಒಂದು ಸ್ಥಳದಿಂದ ಮೊತ್ತೊಂದು ಸ್ಥಳಕ್ಕೆ ಸ್ಥಳಾಂತರ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟು ಆಹಾರ ಧಾನ್ಯಗಳ ಬೆಲೆಗಳು ಏರದಂತೆ ತಡೆ ಮಾಡುತ್ತೇವೆಂದು ಹೇಳಲಾಗಿತ್ತು. ಕೆಲವು ಕಡೆಗಳಲ್ಲಿ ಕಾಳಿನ ಧಾರಣೆ ಕಡಮೆ ಆಗಿದ್ದರೂ ಧಾರ್ವಾಡ ಜಿಲ್ಲೆಯಲ್ಲಿ ಒಂದೇ ವಾರದಲ್ಲಿ ಜೋಳದ ಬೆಲೆ ಇಷ್ಟು ಹೆಚ್ಚಾಗುವುದಕ್ಕೆ ಕಾರಣವೇನು ? ಅಲ್ಲಿಗೆ ಯಾವಲ್ಲಿಂದ ಕಾಳನ್ನು ಸ್ಥಳಾಂತರ ಮಾಡಲಾಯಿತು ?

ಶ್ರೀ ಬಿ. ಡಿ ಜತ್ತಿ.—ಅದಕ್ಕೆ ಮಾನ್ಯ ಸದಸ್ಯರು ಒಂದು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರವನ್ನು ಒದಗಿಸಬಹುದು. ಧಾರ್ವಾಡಕ್ಕೆ ಜೋಳವನ್ನು ಗುಲ್ಬರ್ಗದಿಂದ ತರುವುದಕ್ಕೆ ಅವಕಾಶ ಕೊಡಲಾಗಿದೆ.

ಶ್ರೀ ಬಿ. ಪಿ. ಗಂಗಾಧರ್.—ತುಮಕೂರು ಜಿಲ್ಲೆಯಲ್ಲಿ ಜೋಳದ ಅಭಾವ ಬಹಳ ಇದೆ. ಆದುದರಿಂದ ಸರಕಾರದವರು ಜೋಳ ಕಳುಹಿಸುವಾಗ ತುಮಕೂರು ಜಿಲ್ಲೆಗೂ ಸ್ವಲ್ಪ ಹೆಚ್ಚು ಕಳುಹಿಸಿ ಕೊಡುತ್ತೀರಾ ?

Sri B. D. JATTI.—This question pertains to Ron and Gajendraghad. This does not pertain to Tumkur District.

ಶ್ರೀ ಎ. ಜೆ. ದೊಡ್ಡಮೇಟಿ.—ಸರಕಾರ ಮೂರು ರೂಪಾಯಿನಿಂದ ಒಂಬತ್ತು ರೂಪಾಯಿ ಗಳಷ್ಟು ಧಾರಣೆ ಹೆಚ್ಚು ಇದೆ ಎಂದು ಒಪ್ಪಿದಂತಾಯಿತು. ಆದರೆ ಇಲ್ಲಿ ನೇಕಾರರೇ ಹೆಚ್ಚು ಇರುವುದ ರಿಂದ ಇಲ್ಲಿಗೆ ಹೆಚ್ಚು ಜೋಳ ಕಳುಹಿಸಿ ಅದರ ಹಂಚುವಿಕೆ ಬಗ್ಗೆ ತಕ್ಕ ಕ್ರಮವನ್ನು ಸರಕಾರ ತೆಗೆದು ಕೊಳ್ಳುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರಿಗೂ ಇದು ಮನವರಿಕೆಯಾಗಿದೆ ಮತ್ತು ಸರಕಾರಕ್ಕೂ ಮನವರಿಕೆಯಾಗಿರುವುದರಿಂದ ಇಲ್ಲಿಗೆ ಈಗಾಗಲೇ ಹೆಚ್ಚು ಜೋಳ ಕಳುಹಿಸುವ ಏರ್ಪಾಡು ನಡೆದಿದೆ. ಗಜೇಂದ್ರಗಡದಲ್ಲಿ 1,200 ಲೂಮ್ಸ್ ಇವೆ ಎನ್ನುವುದನ್ನು ಸರಕಾರಕ್ಕೂ ಗೊತ್ತಿದೆ.

ಶ್ರೀ ಕೆ. ಎಚ್. ಪಾಟೀಲ್.—ತಮಗೆ ಬಂದಿರುವ ವರದಿಗಿಂತ ಈಚೆಗೆ ಗದಗ್‌ನಲ್ಲಿ ಹಾಗೂ ಅದರ ಸುತ್ತ ಇರುವ ಗ್ರಾಮಗಳಲ್ಲಿ ಜೋಳದ ಬೆಲೆ ಸುಮಾರು ಒಂದು ನೂರು ರೂಪಾಯಿಯವರೆಗೆ ಏರಿ ಮಾರಾಟವಾಗುತ್ತಿರುವುದನ್ನು ಸರಕಾರ ಕಡಿಮೆ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ನಾನು ಇಲ್ಲಿ ಕೊಟ್ಟಿರುವುದು 21-7-1967ರ ರೇಟು. ಈಚೆಗೆ ಹೆಚ್ಚಾಗಿದ್ದರೆ ಅದನ್ನು ಕಡಿಮೆ ಮಾಡಲಕ್ಕೆ ನೋಡಬಹುದು. ಇದಕ್ಕಾಗಿಯೇ ನಿಮ್ಮ ಸೊಸೈಟಿಯವರಿಗೆ ಇನ್ನೂ ಒಂದು ನಾವಿರ ಮೂಟೆಯಷ್ಟು ಜೋಳ ಕಳುಹಿಸಲು ಕೂಡ ಕ್ರಮ ನಡೆದಿದೆ, ಇದು ತಮಗೂ ಈಗಾಗಲೇ ಗೊತ್ತಿರಬಹುದು.

Mr. SPEAKER.—The Question Hour is over.

QUESTIONS FOR ANSWERS ON THE DAY

(but not taken up)

Starting of an electro pig iron plant

*Q.—18. Sri C. K. RAJAIAH SHETTY (Chikkanayakanahally).—

Will the Chief Minister be pleased to state :—

(*a*) the estimated quantity of Iron ore and Dolomite available in Chikkanayakanahally Sector including Vajra Mines of Hosdurga Taluk ;

(*b*) the grade of ores so far prospected ;

(*c*) whether the resources permit the starting of an electro pig iron plant there ;

(*d*) whether any private firms have come forward seeking licence ?

*A.—Sri A. P. APPANNA (Deputy Minister for Industries).—

	Iron ore	*Dolomite*
(*a*)	35 Million Tones.	Not Estimated.

(*b*) 60 to 65 per cent Fe content.

(*c*) Feasibility has not been examined.

(*d*) Yes.

Free Allowance of Water

*Q.—42. Sri M. S. KRISHNAN (Malleswaram).—

Will the Minister for Municipal Administration be pleased to state :—

(*a*) whether the Chief Minister had discussions with the Chairman, Water Supply Action Committee in respect of the restoration of Free Allowance of Water and reduction of rates for supply of water to the Citizens of Bangalore ;